ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರಃ 28/2011
ಪಿ.ಡಬ್ಲ್ಯೂ : 2

ದಿನಾಂಕಃ 23-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಜಿ ಎಸ್ ಕೆ ಎಸ್. ವಕೀಲರಿಂದಃ

1. ಅಳತೆ ಕಾರ್ಯ ಮಾಡಿದವರು ಹಾಗೂ ನಕಾಶೆ ತಯಾರು ಮಾಡಿದವರು ರವಿರವರು ನಾನು ಸ್ಥಳಕ್ಕೆ ಬೇಟಿ ಕೊಟ್ಟಿರುವುದಿಲ್ಲ. ನಕಾಶೆ ತಯಾರಿಸುವಾಗ ಅವರ ವರದಿಯಂತೆ ಮಂಜೂರಾತಿ ಕಣ್ಣು ನಕಾಶೆಯನ್ನು ನೋಡಿ ವರದಿ ತಯಾರಿಸಿದಂತೆ ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ವಿವಾದಿತ ಜಾಗವಾಗ ಸರ್ವೆ ನಂಬರ್ 251 ರ ಆಸುಪಾಸಿನಲ್ಲಿ ಖಾಸಗಿ ಜಾಗಗಳು ಅಥವಾ ಸರ್ಕಾರಿ ಜಾಗಗಳು ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ರವಿರವರು ಸ್ವಾಧೀನತೆ ಆಧಾರದ ಮೇಲೂ ಸಹ ಅಳತೆ ಮಾಡಿರುತ್ತಾರೆ, ಆ ಬಗ್ಗೆ ಸಹ ವರದಿಯಲ್ಲಿ ನಮೂದಿಸಿರುತ್ತಾರೆ.

2. ಸ್ವಾಧೀನತೆ ನಿರ್ಧರಿಸಲು ಗಡಿ ಅಥವಾಬೇಲಿಯನ್ನು ಆಧಾರವನ್ನಾಗಿ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಅಳತೆ ಅವರು ಮಾಡಿರುತ್ತಾರೆ, ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈಗ ಅಳತಗೆ ಒಳಪಟ್ಟ ಸ್ಥಳ ಈ ಹಿಂದೆ ಒಮ್ಮೆ ಸರ್ವೆ ನಂಬರ್ 534 ಎಂದು ಪ್ಲಾಟಿಂಗ್ ಆದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ಪ್ಲೋಟಿಂಗ್ ನ್ನು ಡಿ ಡಿ ಎಲ್ ಆರ್ ರವರು ರದ್ದು ಮಾಡಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ವಿಚಾರದಲ್ಲಿ ಕರ್ನಾಟಕ ಉಚ್ಚ ನ್ಯಾಯಲಯದಲ್ಲಿ ರಿಟ್ ಪಿಟಿಶನ್ ಸಲ್ಲಿಸಿದ ಬಗ್ಗೆ ಗೊತ್ತಿರುತ್ತದೆ. ನನಗೆ ಪುನಃ ಅಳತೆ ಮಾಡಿ ಎಂದು ಸೂಚಿಸಿರುವುದಿಲ್ಲ, ಸಿವಿಲ್ ನ್ಯಾಯಲಯದಲ್ಲಿ ಪ್ರಕರಣ ಇದ್ದು ಅಲ್ಲಿಯೇ ಬಗೆಹರಿಸಿಕೊಳ್ಳಿ ಎಂದು ಆದೇಶಿಸಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ                ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ